

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಹಿರಿಯ ಜೀವವೊಂದರ ಜೀವನಾದರ್ಶ

"Some are born great, some achieve greatness and greatness is thrust upon some!" (ಕೆಲವರು ಹುಟ್ಟಿನಿಂದ ದೊಡ್ಡವರಾಗಿರುತ್ತಾರೆ, ಕೆಲವರು ಹುಟ್ಟಿ ದೊಡ್ಡವರಾಗುತ್ತಾರೆ ಮತ್ತೆ ಕೆಲವರು ಸ್ಥಾನ ಬಲದಿಂದ ದೊಡ್ಡವರಂತೆ ಕಾಣಿಸಿಕೊಳುತ್ತಾರೆ!) ಎಂಬ ನಾಣ್ಣುಡಿಯೊಂದು ಆಂಗ್ಲ ಭಾಷೆಯಲ್ಲಿದೆ. ದಾವಣಗೆರೆಯಲ್ಲಿ 'ಆರೂಢ ದಾಸೋಹಿ, ದಾನಚಿಂತಾಮಣಿ' ಎಂದೇ ಪ್ರಸಿದ್ಧರಾಗಿದ್ದ ಮಾಗನೂರು ಬಸಪ್ಪನವರು ಹುಟ್ಟಿನಿಂದ ದೊಡ್ಡವರಾಗಿ ಹುಟ್ಟಿದವರಲ್ಲ; ಕಡು ಬಡತನದಲ್ಲಿ ಹುಟ್ಟಿ ದೊಡ್ಡವರಾಗಿ ಬೆಳೆದವರು. ಬದುಕಿನಲ್ಲಿ ಒಂದು ಶಿಸ್ತನ್ನು ರೂಢಿಸಿಕೊಂಡು ಬಾಳಿದವರು. ಜೀವನದ ಕೊನೆಯ ಉಸಿರಿನವರೆಗೂ ಸಮಾಜದ ಚಿಂತನೆಯನ್ನು ಮಾಡಿದವರು, ಸಮಾಜಕ್ಕಾಗಿ ದುಡಿದವರು. ಮುಂಜಾವದ ನಸುಕಿನಲ್ಲಿ ಮೊಣಕಾಲವರೆಗೆ ಕಚ್ಚೆಪಂಚೆಯನ್ನು ಏರಿಸಿ ಕಟ್ಟಿ, ಮೈಮೇಲೆ ಒಂದು ಖಾದಿ ಹಚ್ಚಡವನ್ನು ಹೊದ್ದು, ಎಡಗೈಯಲ್ಲಿ ಹೂಪತ್ರೆಗಳ ಜೋಳಿಗೆಯನ್ನು, ಬಲಗೈಯಲ್ಲಿ ಬೆತ್ತದ ಕೋಲನ್ನು ಹಿಡಿದು ದಾವಣಗೆರೆಯ ನಮ್ಮ ಅನುಭವಮಂಟಪದ ವಸತಿ ಶಾಲೆಯ ಕಡೆಗೆ ದಾಪುಗಾಲಿಡುತ್ತಾ ನಿತ್ಯವೂ ಅವರು ಬರುತ್ತಿದ್ದುದನ್ನು ನೋಡಿದ ಮಕ್ಕಳಿಗೆ ಗಾಂಧಿ ತಾತನೇ ನಡೆದು ಬರುತ್ತಿದ್ದಂತೆ ಭಾಸವಾಗುತ್ತಿತ್ತು! ಬೆಳಗಿನ ಹೊತ್ತು ಬಿಳಿಯ ಸಮವಸ್ತ್ರ ಧರಿಸಿ ಶಾಲೆಯ ಮುಂಭಾಗದಲ್ಲಿ ಶಿಸ್ತಿನಿಂದ ಕವಾಯತು ಮಾಡುತ್ತಿದ್ದ ಆ ಎಳೆಯ ಮಕ್ಕಳನ್ನು ಬಸಪ್ಪನವರು ಪ್ರೀತಿಯಿಂದ 'ಅನುಭವಮಂಟಪದ ಬೆಳಕ್ಕಿ'ಗಳೆಂದೇ ಕರೆಯುತ್ತಿದ್ದರು.

"ಆಮ್ರಾಶ್ಚ ಸಿಕ್ತಾಃ ಪಿತರಶ್ಚ ತೃಪ್ತಾಃ" ಎಂಬ ಗಾದೆ ಮಾತೊಂದು ಸಂಸ್ಕೃತದಲ್ಲಿದೆ. ಮಾವಿನ ಮರದ ಕೆಳಗೆ ನಿಂತು ತರ್ಪಣವನ್ನು ಕೊಟ್ಟರೆ ಮಾವಿನ ಮರಕ್ಕೂ ನೀರಾಯಿತು, ಸ್ವರ್ಗದಲ್ಲಿರುವ ಪಿತೃಗಳಿಗೂ ತೃಪ್ತಿಯಾಯಿತು ಎಂದು ಇದರ ಅರ್ಥ. ಅಂದರೆ ಒಂದೇ ಕಾರ್ಯದಿಂದ ಎರಡು ಉದ್ದೇಶಗಳು ಈಡೇರುವಂತಿದ್ದರೆ ಅಂತಹ ಸಂದರ್ಭದಲ್ಲಿ ಈ ಗಾದೆ ಮಾತನ್ನು ಹೇಳುತ್ತಾರೆ. ಹಾಗೆಯೇ ಬಸಪ್ಪನವರು ಅನುಭವಮಂಟಪದ ಕಡೆಗೆ ಬೆಳಿಗ್ಗೆ ನಡೆದು ಬರುವುದರಲ್ಲಿ ಎರಡು ಉದ್ದೇಶಗಳಿದ್ದವು. ಒಂದು: ಬೆಳಗಿನ ವಾಕಿಂಗ್, ಎರಡು: ಶಿವಪೂಜೆಗೆ ಗಿಡಮರಗಳಿಂದ ಹೂಪತ್ರೆಗಳನ್ನು ಎತ್ತುವುದು. ಇದರ ಜೊತೆಗೆ ಅನುಭವ ಮಂಟಪ ಕಟ್ಟಡದ ಕೆಲಸ ಕಾರ್ಯಗಳ ಪರಿವೀಕ್ಷಣೆಯೂ ಅವರ ಮೂರನೆಯ ಉದ್ದೇಶವಾಗಿತ್ತು. ಕೈಯಲ್ಲಿದ್ದ ಬೆತ್ತದ ಕೋಲೇ ಅವರಿಗೆ ಉದ್ದ ಅಗಲ ಅಳೆಯುವ ಕರಾರುವಾಕ್ಕಾದ ಮಾನದಂಡವಾಗಿತ್ತು.

ಅನುಭವಮಂಟಪದ ಮೆಟ್ಟಿಲುಗಳನ್ನು ಮೇಲೇರಿ ಮೊದಲನೆಯ ಮಹಡಿಯ ಕಾರಿಡಾರ್‌ನಲ್ಲಿ ಬರುವಾಗ ಕೈಯಲ್ಲಿ ಹಿಡಿದಿದ್ದ ಅವರ ಊರುಗೋಲಿನಿಂದ ಟಕ್ ಟಕ್ ಎಂದು ಕೇಳಿಬರುತ್ತಿದ್ದ ಲಯಬದ್ಧವಾದ ಆ ಶಬ್ದ, ಶಿಸ್ತುಬದ್ಧ ಜೀವನದ ಹಿರಿಯ ಚೇತನ ಬಸಪ್ಪನವರ ಆಗಮನದ ಸೂಚನೆಯಾಗಿತ್ತು. ನಿತ್ಯವೂ ವಾಕಿಂಗ್ ಮಾಡುವಾಗ ವಚನಗಳನ್ನು



ಪಠಿಸುವುದು, ಜೊತೆಯಲ್ಲಿ ವಾಕಿಂಗ್ ಬಂದವರಿಗೆ ವಚನಗಳ ಅರ್ಥ ವಿವರಣೆ ನೀಡುವುದು ಅವರ "ವಾಕಿ-ಟಾಕಿ" ಯಾಗಿತ್ತು! ಕ್ಲಿಷ್ಟವಾದ ವಚನಗಳೇನಾದರೂ ಇದ್ದರೆ, 'ಇಲ್ಲೇ ಅನುಭವ ಮಂಟಪದಲ್ಲಿ ಗುರುಗಳು ಇದ್ದರೆ ಕೇಳೋಣ ಬನ್ನಿ' ಎಂದು ಜೊತೆಯಲ್ಲಿದ್ದವರನ್ನು ಹತ್ತಿರ ಕರೆದುಕೊಂಡು ಬಂದು ನಮ್ಮೊಡನೆ ಚರ್ಚಿಸುತ್ತಿದ್ದರು. 95ರ ಇಳಿವಯಸ್ಸಿನಲ್ಲಿಯೂ ಅವರಿಗಿದ್ದ ಜ್ಞಾನದ ದಾಹ "ಅಜರಾಮರವತ್ ಪ್ರಾಜ್ಞೋ ವಿದ್ಯಾಂ ಅರ್ಥಂ ಚ ಚಿಂತಯೇತ್" (ಮುಪ್ಪಿಲ್ಲ ಸಾವಿಲ್ಲವೆಂದು ಪರಿಭಾವಿಸಿ ಜೀವನದಲ್ಲಿ ವಿದ್ಯೆ ಮತ್ತು ಹಣ ಎರಡನ್ನೂ ಸಂಪಾದಿಸಬೇಕು) ಎಂಬ ಸಂಸ್ಕೃತ ನೀತಿವಾಕ್ಯವನ್ನು ಸ್ಮರಣೆಗೆ ತರುತ್ತಿತ್ತು. ಅವರನ್ನು ನೋಡಿದಾಗಲೆಲ್ಲಾ ನಮಗೆ ಪ್ಯಾರಿಸ್ ನಗರದ ಐಫೆಲ್ ಟವರ್ ನೆನಪಾಗುತ್ತಿತ್ತು. 19ನೆಯ ಶತಮಾನದ ಕೊನೆಯ ಭಾಗದಲ್ಲಿ ನಿರ್ಮಾಣವಾದ ಪ್ರಪಂಚದ ಅದ್ಭುತಗಳಲ್ಲಿ ಒಂದಾದ ಆ ನಯನ ಮನೋಹರ ಗಗನಚುಂಬಿ ಐಫೆಲ್ ಟವರನ್ನು ಪ್ಯಾರಿಸ್ ನಾಗರೀಕರು "Old Lady of the City" ಎಂದು ಕರೆಯುತ್ತಾರೆ. ಹಾಗೆಯೇ ದಾವಣಗೆರೆಯಲ್ಲಿ ಕಳೆದ ಶತಮಾನದ ಉದ್ದಕ್ಕೂ ಬದುಕಿದ್ದ ಹಿರಿಯ ಜೀವ ಮಾಗನೂರು ಬಸಪ್ಪನವರನ್ನು "Old Man of the City" ಎಂದು ಹೇಳಬೇಕೆನಿಸುತ್ತಿತ್ತು. ನೂರರ ಗಡಿಯಲ್ಲಿದ್ದ ಅವರ ಕುಂದದ ಜೀವನೋತ್ಸಾಹ, ಸಮಾಜ ಸೇವೆಯ ತುಡಿತ ಎಂತಹ ಯುವಕರನ್ನೂ ನಾಚಿಸುವಂತಿತ್ತು.

ಬಸಪ್ಪನವರು ತಮ್ಮ ಸಾರ್ವಜನಿಕ ಸೇವೆಯಲ್ಲಿ ಯಾರೇ ನಿಂದನೆ ಮಾಡಿದರೂ ವ್ಯಗ್ರರಾಗುತ್ತಿರಲಿಲ್ಲ. "ಸಮಾಜ ಸೇವೆ ಮಾಡಲು ಬಯಸುವವನು ಮೊದಲು ಜನರಿಂದ ಬಯ್ಯಿಸಿಕೊಳ್ಳಲು ಸಿದ್ಧನಿರಬೇಕು" ಎಂದು ಅವರು ಹೇಳುತ್ತಿದ್ದರು. ಸಮಾಜಸೇವೆಯ ಮುಖವಾಡವನ್ನು ಧರಿಸಿದವರು ಅನೇಕರು ಇದ್ದಾರೆ. ಅವರಿಗೆ ಸ್ವಂತ ಕೆಲಸ ಮೊದಲು, ಸಮಾಜದ ಕೆಲಸ ಆಮೇಲೆ. ಆದರೆ ಬಸಪ್ಪನವರ ವಿಷಯವಾಗಿ ಹೇಳುವುದಾದರೆ ಅವರಿಗೆ ಸಮಾಜದ

ಕೆಲಸ ಮೊದಲು, ಸ್ವಂತ ಕೆಲಸ ಆಮೇಲೆ. "ನಮ್ಮಂಥ ಗುರುಗಳನ್ನು ಅನೇಕರನ್ನು ತರಬಹುದು, ಆದರೆ ಬಸಪ್ಪನಂಥ ಒಬ್ಬ ಶಿಷ್ಯನನ್ನು ತರುವುದು ಬಹಳ ಕಷ್ಟ" ಎಂದು ನಮ್ಮ ಲಿಂಗೈಕ್ಯ ಗುರುವರ್ಯರು ಹೇಳುತ್ತಿದ್ದರು.

"ದಾನ ಒರತೆಯ ನೀರು ಇದ್ದಂತೆ" ಎಂದು ಬಸಪ್ಪನವರು ಹೇಳುತ್ತಿದ್ದರು. ಒರತೆಯ ನೀರು ನಲ್ಲಿ ನೀರಿನಂತೆ ನಿಂತು ಹೋಗುವುದಿಲ್ಲ; ಅದನ್ನು ಮೊಗೆದಷ್ಟೂ ಹೆಚ್ಚು ಬರುತ್ತದೆ. ಹಾಗೆಯೇ ದಾನ ನೀಡಿದರೆ ಆದಾಯ ಕಡಿಮೆಯಾಗುವುದಿಲ್ಲ, ಮತ್ತಷ್ಟೂ ಹೆಚ್ಚುತ್ತದೆ ಎಂಬುದು ಬಸಪ್ಪನವರ ದೃಢವಾದ ನಂಬುಗೆಯಾಗಿತ್ತು. "ಕೊಟ್ಟದ್ದು ತನಗೆ, ಬಚ್ಚಿಟ್ಟದ್ದು ಪರರಿಗೆ" ಎಂಬ ಸರ್ವಜ್ಞನ ವಚನಕ್ಕೆ ಬಸಪ್ಪನವರು ಮಾಡುತ್ತಿದ್ದ ವ್ಯಾಖ್ಯಾನವೇ ಬೇರೆ: 'ದುಡ್ಡು ಇಟ್ಟುಕೊಂಡು ಸತ್ತರೆ ಆ ಮನೆಯಲ್ಲಿ ನೀನು ಮತ್ತೆ ಹುಟ್ಟುತ್ತೀಯಾ? ಇಲ್ಲ, ಇನ್ನೊಬ್ಬರ ಮನೆಯಲ್ಲಿ ಹುಟ್ಟುತ್ತೀಯ. ಆಗ ಹಿಂದೆ ದಾನ ಮಾಡಿದ್ದ ಹಣ ನಿನ್ನದಾಗುತ್ತದೆ. ನೀನು ಕೊಟ್ಟ ಹಣ ಮತ್ತೆ ನಿನಗೇ ಸಿಗುತ್ತದೆ' ಎಂದು ಹೇಳುತ್ತಿದ್ದರು. ಬಸಪ್ಪನವರು ಹೀಗೆ ಬರೀ ಹೇಳಲಿಲ್ಲ, ಸ್ವತಃ ಅಪಾರ ಹಣವನ್ನು ದಾನ ಮಾಡಿ ಸಮಾಜದಲ್ಲಿ 'ದಾನಚಿಂತಾಮಣಿ' 'ಆರೂಢದಾಸೋಹಿ' ಎನಿಸಿದರು. ಇತರರಿಗೂ ದಾನಮಾಡುವುದನ್ನು ಕಲಿಸಿದರು.

"The man on the top is always lonely" (ಅತ್ಯುನ್ನತ ಸ್ಥಾನದಲ್ಲಿರುವ ವ್ಯಕ್ತಿ ಯಾವಾಗಲೂ ಏಕಾಂಗಿ) ಎಂಬ ಅನುಭವದ ಮಾತೊಂದು ಆಂಗ್ಲಭಾಷೆಯಲ್ಲಿದೆ. ಎತ್ತರದ ಸ್ಥಾನದಲ್ಲಿರುವ ವ್ಯಕ್ತಿ ತನ್ನ ಕಷ್ಟ-ಸುಖಗಳನ್ನು ಇತರರೊಂದಿಗೆ ಧಾರಾಳವಾಗಿ ಹಂಚಿಕೊಳ್ಳಲು ಆಗುವುದಿಲ್ಲ. ಹಾಗೆ ಮಾಡಲು ಹೋದರೆ ದುಷ್ಟಬುದ್ಧಿಯ ಜನರು ತಮ್ಮ ಸ್ವಾರ್ಥಸಾಧನೆಗೆ ಅದರ ದುರ್ಲಾಭವನ್ನು ಮಾಡಿಕೊಳ್ಳುವುದೇ ಹೆಚ್ಚು. ಸಾರ್ವಜನಿಕ ಜೀವನದಲ್ಲಿ ಜನರನ್ನು ನಂಬುವುದು ಕಷ್ಟ; ನಂಬದೇ ಇರುವುದೂ ಕಷ್ಟ. ಯಾರನ್ನು ಯಾವುದರಲ್ಲಿ ಎಷ್ಟು ನಂಬಬಹುದು ಎಂಬುದರ ಎಚ್ಚರವಿರಬೇಕು. ನಿಸ್ವಾರ್ಥಪರರಾದ ಬಸಪ್ಪನವರು ನಮ್ಮ ಸಾರ್ವಜನಿಕ ಜೀವನದಲ್ಲಿ ಪೂರ್ಣ ನಂಬುಗೆಗೆ ಪಾತ್ರರಾಗಿದ್ದರು. ಸಮಾಜದ ಸುಖ-ದುಃಖಗಳನ್ನು, ಕಷ್ಟ-ನಿಷ್ಠುರಗಳನ್ನು ಹೇಳಿಕೊಂಡು ಮನಸ್ಸನ್ನು ಹಗುರಮಾಡಿಕೊಳ್ಳಲು ನಮಗೆ ಇದ್ದ ಊರುಗೋಲು ಉರುಳಿ ಬಿದ್ದು ಇಲ್ಲಿಗೆ 16 ವರ್ಷಗಳಾದವು!

ಬಸಪ್ಪನವರು ನಮ್ಮ ಒತ್ತಾಸೆಯ ಮೇರೆಗೆ ತಮ್ಮ ಆತ್ಮಕಥನವನ್ನು ಬರೆದುಕೊಟ್ಟಿರುತ್ತಾರೆ. ಅವರ ಮೊಮ್ಮಕ್ಕಳು ಶಾಲೆಯ ಹೋಂ ವರ್ಕ್ ಮಾಡಲು ಬಳಸಿ ಬಿಟ್ಟಿದ್ದ ಹಳೆಯ ಎಕ್ಸರ್‌ಸೈಜ್ ಪುಸ್ತಕದಲ್ಲಿ. 7ನೆಯ ಇಯತ್ತೆಗೇ ಶಾಲೆಗೆ ಶರಣು ಹೊಡೆದು ಮನೆಗೆ ಬಂದು, ದೈವಭಕ್ತಿ ಮತ್ತು ಸ್ವಂತಪರಿಶ್ರಮಗಳಿಂದ ಜೀವನದ ಏಣಿಯನ್ನು ಏರುತ್ತಾ ಬಂದ ಬಸಪ್ಪನವರು ಲೇಖಕರೇನೂ ಅಲ್ಲ. ಆದರೂ ಅವರ ಲೇಖನಿಯಿಂದ ಮೂಡಿಬಂದ ಜೀವನದ ನೈಜ ಅನುಭವ 'ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್ ಈ ನಾಡವರ್ಗಳ್' ಎಂಬ ಮಾತನ್ನು ಪುಷ್ಟೀಕರಿಸುವಂತಿದೆ. ಅವರು ತಮ್ಮ ಜೀವನ ವೃತ್ತಾಂತವನ್ನು ಈ ಮುಂದಿನ ಮಾತುಗಳಿಂದ ಪರಿಸಮಾಪ್ತಿಗೊಳಿಸಿದ್ದಾರೆ:

> **"ಯಾವ ಸಂಘ-ಸಂಸ್ಥೆಯ ಹಣಕಾಸು ತಮ್ಮ ಮನೆತನಕ್ಕೆ ದುರುಪಯೋಗವಾಗಬಾರದು. ಒಂದು ಕಟ್ಟಿಗೆ ತುಂಡು, ಒಂದು ಕಲ್ಲು ಸಹ ತಮ್ಮ ಮನೆಗೆ ಬರಬಾರದು. ಆ ಹಣದಲ್ಲಿ ಒಂದು ಕಾಸೂ ತಮ್ಮ ಮನೆಗೆ ಬಳಕೆಯಾಗಬಾರದು. ಈ ನೇಮ ನಡೆಸಿದರೆ ದೇವರು ಕೆಲಸಗಾರನ (ಸಮಾಜಸೇವಕನ) ಬೆನ್ನು ಬಿಡುವುದಿಲ್ಲ. ಇದು ನನ್ನ ಅನುಭವ. ಇದನ್ನು ಎಲ್ಲರೂ ಪಾಲಿಸಿದರೆ ಇಂಡಿಯಾ ದೇಶವನ್ನು ಸ್ವರ್ಗವನ್ನಾಗಿ ಮಾಡಬಹುದು. ಇಂಥವರ ಹುಟ್ಟಿನಿಂದ ದೇಶ ಬೆಳೆಯಲೆಂದು ಪರಮಾತ್ಮನಲ್ಲಿ ಪ್ರಾರ್ಥಿಸುತ್ತೇನೆ."**

ಈ ಮಾತುಗಳಲ್ಲಿರುವ ಸಾಮಾಜಿಕ ಕಳಕಳಿ, ರಾಷ್ಟ್ರಪ್ರೇಮ "ಹೊನ್ನಿನೊಳಗೊಂದೊರೆಯ, ವಸ್ತ್ರದೊಳಗೊಂದೆಳೆಯ ಇಂದಿಂಗೆ ನಾಳಿಂಗೆ ಬೇಕೆಂದೆನಾದೊಡೆ ನಿಮ್ಮಾಣೆ, ನಿಮ್ಮ ಪುರಾತರಾಣೆ" ಎನ್ನುವ ಬಸವಣ್ಣನವರ ವಚನವನ್ನು ನೆನಪಿಗೆ ತರುತ್ತವೆ. ದಿನದಿಂದ ದಿನಕ್ಕೆ ಸತ್ಯದಿಂದ ಅಸತ್ಯದ ಕಡೆಗೆ, ಬೆಳಕಿನಿಂದ ಕತ್ತಲೆಯ ಕಡೆಗೆ ಸಾಗುತ್ತಿರುವ ಇಂದಿನ ದಿನಮಾನಗಳಲ್ಲಿ ಲಿಂಗೈಕ್ಯ ಬಸಪ್ಪನವರ ಈ ಸದಾಶಯದಂತೆ ನಡೆಯುವ ಮುತ್ಸದ್ದಿಗಳು ಅದೆಷ್ಟು ಜನ ಸಿಗಬಲ್ಲರು?

3.11.2011

ಶ್ರೀ ತರಳಬಾಳು ಜಗದ್ಗುರು
ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ